ಸಂಖ್ಯೆ: ಹೆಚ್.ಯು.ಡಿ :16 : ಯುಡಬ್ಲ್ಯು.ಎಸ್: 85 ದಿನಾಂಕ: 18.6.85ರಲ್ಲಿ ಮಂಜೂರಾತಿ ನೀಡಿತು. ಈ ಯೋಜನೆಯನ್ನು ತಾಂತ್ರಿಕ ದೃಷ್ಟಿಯಿಂದ ಹಾಗೂ ಕೆಲವು ಹೆಚ್ಚಿನ ಕಾಮಗಾರಿಯನ್ನು ಸೇರಿಸಿ 48.50 ಲಕ್ಷ ರೂ.ಗಳಿಗೆ ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿ, ಈ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಸರ್ಕಾರದ ಆಜ್ಞೆ: ಹೆಚ್.ಯು.ಡಿ: ೩ ಯುಡಬ್ಲ್ಯು.ಎಸ್.: 89 ದಿನಾಂಕ: 21.11.1988ರಲ್ಲಿ ಜಾರಿಕಿದೆ.

ಪರಿಷ್ಕೃತ ಅಂದಾಜನ ಪ್ರಕಾರ ಕೆಳಗೆ ಕಾಣಿಸಿರುವ ಕಾಮಗಾರಿ ಕೆಲಸಗಳನ್ನು ಮುಗಿಸಲಾಗಿರುತ್ತದೆ.

ಅ) ಘಟಕ ಶೇಖರಣಾಗಾರಕ್ಕೆ ಪೂರಕ ಕೊಳವೆ;

ಆ) 90 ಎಂಎಂ ಪಿವಿಸಿ ವಿತರಣೆ ಕೊಳವೆಗಳನ್ನು ಅಳವಡಿಸುವುದು;

ಇ) 160 ಮಿ.ಮಿ. ವ್ಯಾಸದ ಕೊಳವೆ ಅಳವಡಿಸುವುದು;

ಈ) 250 ಮಿ.ಮಿ. ಬೀಡು ಕಬ್ಬಿಣದ ಕೊಳವೆ ಅಳವಡಿಸುವುದು;

ಉ) 250 ಮಿ.ಮಿ. ಬೀಡು ಕಬ್ಬಿಣದ ಕೊಳವೆಗಳಿಗೆ ತಡೆಗೋಡೆ ನಿರ್ಮಿಸುವ ಕೆಲಸ.

2. 2.50 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ನೀರು ಸಂಗ್ರಹಣಾಗಾರದ ಕೆಲಸ ಮುಗಿದಿದೆ.

3. ಸಿಲೋನ್ ನಿರಾಶ್ರಿತ ಪ್ರದೇಶದಲ್ಲಿ 15,000 ಲೀಟರ್ ಸಾಮರ್ಥ್ಯದ ತೊಟ್ಟಿ ಮತ್ತು ಪಂಪ್ ಕೆಲಸವನ್ನು ಮುಗಿಸಿದೆ.

4. ಸುಳ್ಯ ನಗರದಲ್ಲಿ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಅರ್ಧ ಇಂಚು ಮತ್ತು ಒಂದು ಇಂಚು ಕೊಳವೆಗಳನ್ನು ಅಳವಡಿಸಿರುವುದಿಲ್ಲ.

ಸದರಿ ಯೋಜನೆಗೆ ಸಂಬಂಧಪಟ್ಟ ಉಳಿದ ಎಲ್ಲಾ ಕೆಲಸಗಳನ್ನು 1992ನೇ ವರ್ಷದ ಅಂತ್ಯದೊಳಗೆ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

3) ಮೈಸೂರು ಸಕ್ಕರೆ ಕಾರ್ಖಾನೆಯು ಲಾಭಗಳಿಸಿರುವುದರಿಂದ ರೈತರಿಗೆ ಬೋನಸ್ ಪ್ರಕಟಿಸಿರುವುದು.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೇ,

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು 1989-90ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಸುಮಾರು ಐದು ಲಕ್ಷ ಟನ್ನಿನಷ್ಟು ಕಬ್ಬನ್ನು ಅರೆದಿದೆ. ಈ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಯು ಅಧಿಕ ಲಾಭವನ್ನು ಗಳಿಸಿದೆ. ಮಂಡ್ಯ ಜಿಲ್ಲೆಯಲ್ಲಿನ ಉಳಿದ ಸಕ್ಕರೆ ಕಾರ್ಖಾನೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿ, ಅಧಿಕ ಲಾಭವನ್ನು ಗಳಿಸಿ, ಲಾಭಾಂಶದಲ್ಲಿ ರೈತರುಗಳಿಗೆ - ಬೋನಸ್ ಹಣವನ್ನು ಪ್ರೋತ್ಸಾಹಕರ ರೀತಿಯಲ್ಲಿ ಕೊಟ್ಟಿದ್ದಾರೆ. ಆದರೆ, ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಯಾವುದೇ ರೀತಿಯ ಬೋನಸ್ ಹಣವನ್ನು ಈವರೆವಿಗೆ ಕೊಟ್ಟಿರುವುದಿಲ್ಲ. ಇದರಿಂದ ರೈತರಿಗೆ ನಿರಾಸೆಯಾಗಿದೆ. ಬೋನಸ್ ಹಣದ ಪಾವತಿಗಾಗಿ ಆಡಳಿತಮಂಡಳಿಗೆ ಅನೇಕ ಬಾರಿ ಮನವಿ ಮಾಡಿದ್ದಾಗ್ಯೂ ಈವರೆಗೆ ಯಾವುದೇ ರೀತಿಯ ಫಲ ಸಿಕ್ಕಿರುವುದಿಲ್ಲ. ಆದುದರಿಂದ ರೈತರಿಗೆ ಬೋನಸ್ ಹಣ ನೀಡುವ ಬಗೆಗೆ ಶೀಘ್ರ ನಿರ್ಣಯ ಕೈಗೊಂಡು ರೈತರಿಗೆ ಬೋನಸ್ ಹಣ ಕೊಡಿಸಿ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರ ಪರವಾಗಿ): ಮೈಸೂರು ಸಕ್ಕರೆ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯು ಇನ್ನು ಮುಗಿದಿಲ್ಲವ

ಕಾರಣ ಸದರಿ ವರ್ಷದಲ್ಲಿ ಲಾಭ ಮತ್ತು ನಷ್ಟ ಆಗಿದೆಯೇ ಎಂಬ ಬಗ್ಗೆ ಸದ್ಯಕ್ಕೆ ಖಚಿತವಾಗಿ ಹೇಳಲಾಗುವುದಿಲ್ಲ.

ಆದರೂ, ಮೈಸೂರು ಸಕ್ಕರೆ ಕಾರ್ಖಾನೆಯು 1989-90ನೇ ಸಾಲಿನಲ್ಲಿ ರಾಜ್ಯ ಸಲಹಾ ಬೆಲೆಯು ನಿಗದಿಪಡಿಸಿದ ರೂ.325-00ಗಳಿಗೆ ಬದಲಾಗಿ ರೂ.335-00ಗಳನ್ನು ಪ್ರತಿ ಮೆಟ್ರಿಕ್ ಟನ್ನಿಗೆ ರೈತರಿಗೆ ನೀಡಿದೆ.

ಸಕ್ಕರೆ ಕಾರ್ಖಾನೆಗೆ ಲಾಭ ಬಂದಿದೆಯೆಂದು ಖಚಿತವಾದ ನಂತರವೇ ರೈತರಿಗೆ ಬೋನಸ್ ಕೊಡುವ ಪ್ರಶ್ನೆ ಉದ್ಭವಿಸುವುದು. ಸದರಿ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯ 1991ನೇ ಮಾರ್ಚಿ ಅಂತ್ಯದಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ.

ಸದರಿ ಕಾರ್ಖಾನೆಯು ದಿನಾಂಕ 31-3-1989ರ ಅಂತ್ಯದವರೆವಿಗೂ ನಷ್ಟದಲ್ಲಿತ್ತು.

4) ಬಡಜನರಿಗೆ ಉಚಿತ ನಿವೇಶನ ಹಂಚುವ ಯೋಜನೆ

ಶ್ರೀ ಕೆ. ಸೋಮಪ್ಪ ಸುವರ್ಣ: ಈ ಬಾರಿಯ ರಾಜ್ಯಪಾಲರ ಭಾಷಣದಲ್ಲಿ ಬಡಜನರಿಗೆ ಉಚಿತನಿವೇಶನವನ್ನು ನಮ್ಮ ಸರಕಾರವು ಕೊಡುವುದೆಂದು ತಿಳಿಸಲಾಗಿದೆ. ಆದರೆ ಈ ತನಕ ಸಹ ನಮ್ಮ ಸರಕಾರವು ಬಡಜನರಿಗೆ ಕೊಡುವ ನಿವೇಶನಗಳಿಗೆ ಹಣ ವಸೂಲು ಮಾಡುತ್ತಾ ಇದ್ದು, ಇದು ಬಡಜನರಿಗೆ ಬಹಳ ತೊಂದರೆಯಾಗಿದೆ. ಸರಕಾರವು ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತಪಡಿಸಿದ ಉಚಿತ ನಿವೇಶನ ಕೊಡುಗೆಯನ್ನು ಏಕೆ ಕಾರ್ಯಗತಗೊಳಿಸಲಿಲ್ಲವೆಂದು ಗೊತ್ತಾಗುವುದಿಲ್ಲ. ಆದರಿಂದ ಬಡಜನರಿಗೆ ಕೊಡಮಾಡಿದ ಈ ಉಚಿತ ನಿವೇಶನದ ಸೌಲಭ್ಯವು ಸಿಗುವಂತೆ ಸರಕಾರವು ಕೂಡಲೇ ಹುಕುಂನ್ನು ಹೊರಡಿಸುವಂತೆ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ಯ ಸಚಿವರು): ಗ್ರಾಮಾಂತರ ಪ್ರದೇಶದಲ್ಲಿನ ನಿವೇಶನರಹಿತ ಬಡಜನರಿಗೆ ಉಚಿತ ನಿವೇಶನ ಹಂಚುತ್ತಿದ್ದು, ಇಲ್ಲಿಯವರೆಗೂ ಉಚಿತ ನಿವೇಶನಕ್ಕೆ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಮತ್ತು ಉಚಿತ ನಿವೇಶನ ಹಂಚುವ ಕಾರ್ಯವನ್ನು ನಡೆಸುತ್ತಿದ್ದು ಇನ್ನು ಮುಂದೆಯೂ ಸಹ ನಿವೇಶನವನ್ನು ಉಚಿತವಾಗಿ ಬಡಜನರಿಗೆ ಹಂಚಲಾಗುವುದು. ಇನ್ನು ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಎಲ್ಲಿಯಾದರೂ ಹಣವಸೂಲು ಮಾಡುವಂತಹ ನಿರ್ದೇಶನಗಳು ಬಂದರೆ ನಾವು ಅದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

1.	Total sites formed so far:	14.90 lakhs house sites have been distributed from 1972-73 and upto end of March 1990. Another 19,000 (approximately) house sites have been distributed between 1-4-90 and 31-12-90.
2.	How many are accommodated: a) Acquired lands b) Govt. lands	 Information is being collected fromall the DeputyCommissioners.